# ವೀರಶೈವ ಸಹಕಾರಿ ಬ್ಯಾಂಕ್ ಲಿ.,

ನಂ.1732/2, ಎಂ.ಸಿ.ರಸ್ತೆ, ಎಂ.ಸಿ.ಲೇಔಟ್, ವಿಜಯನಗರ, ಬೆಂಗಳೂರು-560040, ಕರ್ನಾಟಕ


ಸಂಖ್ಯೆ: ವಿಎಸ್‌ಬಿ/ಸಿ.ನೇಮಕಾತಿ/40/2026-27 ದಿನಾಂಕ 24-04-2026

## ನೇಮಕಾತಿ ಪ್ರಕಟಣೆ – ಅಧಿಸೂಚನೆ

ವೀರಶೈವ ಸಹಕಾರಿ ಬ್ಯಾಂಕ್ ಲಿ., ವಿಜಯನಗರ, ಬೆಂಗಳೂರು ಇದರಲ್ಲಿ ಖಾಲಿಯಿರುವ ಈ ಕೆಳಕಂಡ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು, ಇವರ ಆದೇಶ ಸಂಖ್ಯೆ: ಆರ್‌ಸಿಎಸ್/ಯುಬಿಸಿ-1/ಯುಸಿಎಸ್/ನಿ.ಪ್ರ.ನೇ/305/2025-26, ದಿನಾಂಕ 06-01-2026ರ ರೀತ್ಯಾ ಅನುಮತಿ ನೀಡಿದ್ದು, ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇಚ್ಛೆಯುಳ್ಳ ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ಬ್ಯಾಂಕಿನ ವೆಬ್‌ಸೈಟ್ www.vsbank.in ರಲ್ಲಿರುವ ಲಿಂಕ್ https://tascguru.com/veerashaiva-sahakari-bank/ ನ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

| ಕ್ರ.ಸಂ | ಹುದ್ದೆಯ ಹೆಸರು | ಒಟ್ಟು ಹುದ್ದೆಗಳು | ವೇತನ ಶ್ರೇಣಿ |
|---|---|---|---|
| 1. | ಕಿರಿಯ ಸಹಾಯಕರು | 10 | 49050-1250-92500 |
| 2. | ಅಟೆಂಡರ್ | 2 | 34100-800-67600 |

1. **ಆಯ್ಕೆ ಪ್ರಕ್ರಿಯೆಗೆ ನಿಗಧಿಪಡಿಸಿರುವ ದಿನಾಂಕಗಳು**

| | |
|---|---|
| ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಪ್ರಾರಂಭದ ದಿನಾಂಕ ಮತ್ತು ವೇಳೆ | 27-04-2026 ರ ಸೋಮವಾರ ಬೆಳಗ್ಗೆ 10.30 ಗಂಟೆಯಿಂದ |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ | 27-05-2026 ರ ಬುಧವಾರ ಸಂಜೆ 5.30 ರವರೆಗೆ |

2. ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ ನಂ.8310460727 ಗೆ ಸಂಪರ್ಕಿಸುವುದು.

3. **ವಿದ್ಯಾರ್ಹತೆ:**

| ಕ್ರ.ಸಂ | ಹುದ್ದೆಯ ಹೆಸರು | ಕನಿಷ್ಠ ಅರ್ಹತೆ |
|---|---|---|
| (i) | ಕಿರಿಯ ಸಹಾಯಕರು | 1. ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾನಿಲಯದ ಯಾವುದೇ ಪದವಿಯಲ್ಲಿ ತೇರ್ಗಡೆಯಾಗಿರಬೇಕು.<br>2. ಕಂಪ್ಯೂಟರ್ ಜ್ಞಾನ ಹೊಂದಿರಬೇಕು<br>3. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು ಹಾಗೂ ಎಸ್‌ಎಸ್‌ಎಲ್‌ಸಿ ಯಲ್ಲಿ ಕನ್ನಡವನ್ನು ಐಚ್ಛಿಕ ಭಾಷೆಯಾಗಿ ಓದಿರಬೇಕು. |
| (ii) | ಅಟೆಂಡರ್ | ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾಗಿದ್ದು ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. |

4. **ವಯೋಮಿತಿ:**

ಅಭ್ಯರ್ಥಿಗೆ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳಾಗಿರಬೇಕು ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ರೀತ್ಯಾ ಈ ಕೆಳಕಂಡ ಗರಿಷ್ಠ ವಯೋಮಿತಿಗೊಳಪಟ್ಟಿರಬೇಕು.

| ಕ್ರ.ಸಂ | ವಿವರ | ಗರಿಷ್ಠ ವಯೋಮಿತಿ | ಸರ್ಕಾರದ ಆದೇಶದನ್ವಯ ಸಡಿಲಿಕೆ ನಂತರ |
|---|---|---|---|
| (i) | ಸಾಮಾನ್ಯ ವರ್ಗದವರಿಗೆ | 35 ವರ್ಷ | 40 ವರ್ಷ |
| (ii) | ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ<br>ವಿವರಣೆ:- ಈ ಕಂಡ (ii)ರ ಉದ್ದೇಶಕ್ಕಾಗಿ ಇತರೆ ಹಿಂದುಳಿದ ವರ್ಗ ಎಂದರೆ, ನೇಮಕಾತಿ ಉದ್ದೇಶಕ್ಕಾಗಿ 2-ಎ, 2-ಬಿ, 3-ಎ ಮತ್ತು 3-ಬಿ ಯಾಗಿ ವರ್ಗೀಕರಿಸಲಾಗಿರುವ ಪರಿಶಿಷ್ಟ ಜಾತಿಗಳು ಅಥವಾ ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿದ ಅಭ್ಯರ್ಥಿಗಳು. | 38 ವರ್ಷ | 43 ವರ್ಷ |
| (iii) | ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಅಥವಾ ಇತರೆ ಹಿಂದುಳಿದ ವರ್ಗಗಳ ವರ್ಗ-1ಕ್ಕೆ ಸೇರಿರುವ ಅಭ್ಯರ್ಥಿಗಳಿಗೆ | 40 ವರ್ಷ | 45 ವರ್ಷ |

**ವಿಶೇಷ ಸೂಚನೆ:**

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 262 ಸೇನೆನಿ 2025, ಬೆಂಗಳೂರು, ದಿನಾಂಕ 29-01-2026 ರ ಅನ್ವಯ ದಿನಾಂಕ 31-12-2027ರವರೆಗೆ ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೆ ನಿಗಧಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಒಂದು ಬಾರಿಯ ಕ್ರಮವಾಗಿ (As a one-time measure) 5 ವರ್ಷಗಳ ಸಡಿಲಿಕೆ ನೀಡಲಾಗಿದೆ.

5. **ಅರ್ಜಿ ಶುಲ್ಕ**

| ಕ್ರ.ಸಂ | ಹುದ್ದೆಗಳ ವಿವರ | ಶುಲ್ಕದ ವಿವರ |
|---|---|---|
| (i) | ಕಿರಿಯ ಸಹಾಯಕರು | ಸಾಮಾನ್ಯ ವರ್ಗ ಮತ್ತು ಹಿಂದುಳಿದ ವರ್ಗ 2-ಎ, 2-ಬಿ, 3-ಎ ಹಾಗೂ 3-ಬಿ ವರ್ಗದ ಅಭ್ಯರ್ಥಿಗಳಿಗೆ ರೂ.2,000/- (ರೂ.ಎರಡು ಸಾವಿರ ಮಾತ್ರ) + ಜಿಎಸ್‌ಟಿ 360 ಒಟ್ಟು ರೂ.2,360/-<br>ಮಹಿಳಾ ಅಭ್ಯರ್ಥಿ, ಪರಿಶಿಷ್ಠ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಅಥವಾ ಇತರೆ ಹಿಂದುಳಿದ ವರ್ಗಗಳ ವರ್ಗ-1ಕ್ಕೆ ಸೇರಿರುವ ಅಭ್ಯರ್ಥಿಗಳಿಗೆ ರೂ.1,000/- (ರೂ.ಒಂದು ಸಾವಿರ ಮಾತ್ರ) + ಜಿಎಸ್‌ಟಿ ರೂ.180/- ಒಟ್ಟು ರೂ.1,180/- |
| (ii) | ಅಟೆಂಡರ್ | ಸಾಮಾನ್ಯ ವರ್ಗ ಮತ್ತು ಹಿಂದುಳಿದ ವರ್ಗ 2-ಎ, 2-ಬಿ, 3-ಎ ಹಾಗೂ 3-ಬಿ ವರ್ಗದ ಅಭ್ಯರ್ಥಿಗಳಿಗೆ ರೂ.1,000/- (ರೂ.ಒಂದು ಸಾವಿರ ಮಾತ್ರ) + ಜಿಎಸ್‌ಟಿ ರೂ.180/- ಒಟ್ಟು ರೂ.1,180/-<br>ಮಹಿಳಾ ಅಭ್ಯರ್ಥಿ, ಪರಿಶಿಷ್ಠ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಅಥವಾ ಇತರೆ ಹಿಂದುಳಿದ ವರ್ಗಗಳ ವರ್ಗ-1ಕ್ಕೆ ಸೇರಿರುವ ಅಭ್ಯರ್ಥಿಗಳಿಗೆ ರೂ.500/- (ರೂ. ಐದು ನೂರು ಮಾತ್ರ) + ಜಿಎಸ್‌ಟಿ ರೂ.90/- ಒಟ್ಟು ರೂ.590/- |

Payment is only through online payment link embeded in the online link through that payment using Net Banking, Credit Card, Debit Card & UPI ಮುಖಾಂತರ ಅರ್ಜಿ ಶುಲ್ಕ, ಅನ್ವಯಿಸುವ GST 18% ಶುಲ್ಕ ಒಳಗೊಂಡಂತೆ ಪಾವತಿಸತಕ್ಕದ್ದು. **ಡಿಡಿ/ಚೆಕ್/ಪೋಸ್ಟಲ್ ಆರ್ಡರ್/ಮನಿ ಆರ್ಡರ್** ಗಳನ್ನು ಸ್ವೀಕರಿಸಲಾಗುವುದಿಲ್ಲ.

6. ಆಯ್ಕೆ ವಿಧಾನ

ಕಿರಿಯ ಸಹಾಯಕರ ಹುದ್ದೆಗಳನ್ನು 2 ಗಂಟೆಗಳ ಅವಧಿಯ ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ಈ ಕೆಳಕಂಡ ವಿಷಯಗಳು ಒಳಗೊಂಡಿರುತ್ತದೆ.

**ಕಿರಿಯ ಸಹಾಯಕರ ಹುದ್ದೆಗಳಿಗೆ 200 ಅಂಕಗಳ ಲಿಖಿತ ಪರೀಕ್ಷೆಯು ಈ ಕೆಳಕಂಡ ವಿಷಯಗಳು ಒಳಗೊಂಡಿರುತ್ತವೆ.**

| ಕ್ರ.ಸಂ | ವಿಷಯ | ಅಂಕಗಳು |
|---|---|---|
| 1. | ಕನ್ನಡ ಭಾಷೆ | 50 |
| 2. | ಸಾಮಾನ್ಯ ಇಂಗ್ಲೀಷ್ | 25 |
| 3. | ಸಾಮಾನ್ಯ ಜ್ಞಾನ | 25 |
| 4. | ಸಹಕಾರಿ ವಿಷಯಗಳು | 50 |
| 5. | ಭಾರತ ಸಂವಿಧಾನ | 25 |
| 6. | ಬ್ಯಾಂಕು / ಸಂಸ್ಥೆಯ ಯುಕ್ತವಾದ ಚಟುವಟಿಕೆಗಳು ಮತ್ತು ವಸ್ತುನಿಷ್ಠ ವಿಷಯ ವಸ್ತುಗಳಿಗೆ ಸಂಬಂಧಿಸಿದಂತೆ | 25 |
| | | 200 |

ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ರಚಿಸಲಾದ ಅರ್ಹತಾ(ಮೆರಿಟ್ ಲಿಸ್ಟ್) ಪಟ್ಟಿಯ ಪ್ರಕಾರ 1 : 5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳನ್ನು ಶೇ.85ಕ್ಕೆ ಇಳಿಸಿ ಉಳಿದ 15 ಪ್ರತಿಶತ ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವುದು. ಈ ರೀತಿ ಲಿಖಿತ ಮತ್ತು ಸಂದರ್ಶನದಲ್ಲಿ ಪಡೆದ ಅಂಕಗಳನ್ನು ಒಟ್ಟುಗೂಡಿಸಿ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು (Final Selection List) ರಚಿಸಲಾಗುವುದು.

**ಅಟೆಂಡರ್ ಹುದ್ದೆಗಳನ್ನು 1 ಗಂಟೆಯ ಅವಧಿಯ ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.**

| ಕ್ರ.ಸಂ | ವಿಷಯ | ಅಂಕಗಳು |
|---|---|---|
| 1. | ಕನ್ನಡ ಭಾಷೆ | 50 |
| 2. | ಸಾಮಾನ್ಯ ಜ್ಞಾನ | 50 |
| | ಒಟ್ಟು | 100 |

ಅಟೆಂಡರ್ ಹುದ್ದೆಗೆ ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ರಚಿಸಲಾದ ಅರ್ಹತಾ(ಮೆರಿಟ್ ಲಿಸ್ಟ್) ಪಟ್ಟಿಯ ಪ್ರಕಾರ 1 : 5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳನ್ನು ಶೇ.85ಕ್ಕೆ ಇಳಿಸಿ ಉಳಿದ 15 ಪ್ರತಿಶತ ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವುದು. ಈ ರೀತಿ ಲಿಖಿತ ಮತ್ತು ಸಂದರ್ಶನದಲ್ಲಿ ಪಡೆದ ಅಂಕಗಳನ್ನು ಒಟ್ಟುಗೂಡಿಸಿ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು (Final Selection List) ರಚಿಸಲಾಗುವುದು.

**ಕಡ್ಡಾಯವಾಗಿ ಹಾಜರುಪಡಿಸಬೇಕಾದ ದೃಢೀಕರಣ ಪತ್ರಗಳು**

ಅರ್ಜಿಯ ಜೊತೆ ಸಂಬಂಧಿಸಿದ ಈ ಕೆಳಕಂಡ ಪ್ರಮಾಣಪತ್ರಗಳನ್ನು ಆನ್‌ಲೈನ್ ಮೂಲಕ ತಪ್ಪದೇ ಸ್ವಹಸ್ತಾಕ್ಷರದಿಂದ ದೃಢೀಕರಿಸಿ ಅಪ್‌ಲೋಡ್ ಮಾಡುವುದು ಹಾಗೂ ಮೌಖಿಕ ಸಂದರ್ಶನಕ್ಕೆ ಅರ್ಹರಾದಲ್ಲಿ ಸದರಿ ಮೂಲ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಹಾಜರುಪಡಿಸುವುದು.

ಎ) ಸ್ವ ಹಸ್ತಾಕ್ಷರವಿರುವ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ.

ಬಿ) ವಿವಿಧ ಹುದ್ದೆಗಳಿಗೆ ನಿಗಧಿಪಡಿಸಿದ ವಿದ್ಯಾರ್ಹತೆಗೆ ಸಂಬಂಧಿಸಿದ ಎಲ್ಲಾ ಪ್ರಮಾಣ ಪತ್ರಗಳ ಅಂಕಪಟ್ಟಿಗಳು.

ಸಿ) ವಯಸ್ಸಿನ ದೃಢೀಕರಣ ಕುರಿತು ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ/ವರ್ಗಾವಣೆ ಪ್ರಮಾಣ ಪತ್ರ.

ಡಿ) ಸೇವಾ ಅನುಭವ ಪ್ರಮಾಣ ಪತ್ರ

ಇ) OBC Cat-1, SC & ST ಅಭ್ಯರ್ಥಿಗಳಿಗೆ ಶುಲ್ಕ ರಿಯಾಯಿತಿ ಪಡೆಯಲು ಸಂಬಂಧಪಟ್ಟ ಪ್ರಾಧಿಕಾರದಿಂದ ನೀಡಿದ ಜಾತಿ ಪ್ರಮಾಣ ಪತ್ರ.

**ಸೂಚನೆಗಳು :**

ಲಿಖಿತ ಪರೀಕ್ಷೆಗೆ ಅರ್ಹವಿರುವ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ಹಾಗೂ ಲಿಖಿತ ಪರೀಕ್ಷೆಯ ದಿನಾಂಕ, ಸ್ಥಳ ಮತ್ತು ಸಮಯವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು. ಅರ್ಹ ಅಭ್ಯರ್ಥಿಗಳ ಲಿಖಿತ ಪರೀಕ್ಷೆಯ ಪ್ರವೇಶ ಪತ್ರ (Hall Ticket) ಗಳನ್ನು ಅಧಿಕೃತ ವೆಬ್‌ಸೈಟ್ www.vsbank.in ದಿಂದ ಡೌನ್‌ಲೋಡ್ ಮಾಡಿಕೊಂಡು ಲಿಖಿತ ಪರೀಕ್ಷೆಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು. ಲಿಖಿತ ಪರೀಕ್ಷೆಗೆ / ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಿಂದಲೇ ಹಾಜರಾಗತಕ್ಕದ್ದು.

(i) ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡಲು ಆನ್‌ಲೈನ್ ನಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೇ ಪಾಲಿಸತಕ್ಕದ್ದು.

(ii) ಸದರಿ ನೇಮಕಾತಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 10 ನೇ ತರಗತಿಯಲ್ಲಿ ಕನ್ನಡವನ್ನು ಒಂದು ಐಚ್ಛಿಕ ಬಾಷೆಯಾಗಿ ಓದಿರಬೇಕು.

(iii) ಸ್ಪಷ್ಟ ಮಾಹಿತಿಗಳನ್ನು ನೀಡದೆ ಹಾಗೂ ತಪ್ಪು ಮಾಹಿತಿಗಳನ್ನು ಸಲ್ಲಿಸಿದಲ್ಲಿ ಅಂತಹ ಅಭ್ಯರ್ಥಿಗಳ ಅರ್ಜಿಯನ್ನು ಯಾವುದೇ ನೋಟಿಸ್ ನೀಡದೆ ತಿರಸ್ಕರಿಸಲಾಗುವುದು.

(iv) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ 27-05-2026 ರಂದು ಸಾಯಂಕಾಲ 5.30ವರೆಗೂ ಇರುತ್ತದೆ.

(v) ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಇತರೇ ಯಾವುದೇ ನೇಮಕಾತಿಗೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.

(vi) ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಅಪ್ಲೋಡ್ ಮಾಡಬೇಕಾದ ಪ್ರಮಾಣಪತ್ರ ದಾಖಲಾತಿಗಳನ್ನು ಸ್ಪಷ್ಟವಾಗಿ ಕಾಣುವಂತೆ ಮತ್ತು ಓದಲು ಸಾಧ್ಯವಾಗುವಂತೆ ಸ್ಕ್ಯಾನ್ ಮಾಡಿ ಅಪಲೋಡ್ ಮಾಡತಕ್ಕದ್ದು.

(vii) ಅರ್ಜಿಯಲ್ಲಿ ನಮೂದಿಸಿದ ಅಂಕಪಟ್ಟಿ / ಇತರೆ ದಾಖಲಾತಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

(viii) ನೇಮಕಾತಿಯನ್ನು ಯಾವುದೇ ಕಾರಣವನ್ನು ನೀಡದೇ ಮುಂದೂಡುವ, ರದ್ದುಪಡಿಸುವ ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

(ix) ಶುಲ್ಕವನ್ನು ಪಾವತಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದ ನಂತರ ಶುಲ್ಕವನ್ನು ಸಂದಾಯ ಮಾಡಿದಲ್ಲಿ ಅಂತಹವರ ಅರ್ಜಿಯನ್ನು ತಿರಸ್ಕರಿಸಲಾಗುವುದು.

(x) ತಪ್ಪು ಮಾಹಿತಿ ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತವರ ವಿರುದ್ಧ ಬ್ಯಾಂಕು ಕಾನೂನಿನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(xi) ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸುವ ಮೊದಲು ಎಲ್ಲಾ ವಿವರಗಳು ಸರಿಯಾಗಿದೆಯೇ ಎಂದು ಪರೀಕ್ಷಿಸಿಕೊಂಡು ಸಲ್ಲಿಸಲು ಸೂಚಿಸಿದೆ. ಸಲ್ಲಿಸಿದ ನಂತರ ವಿವರಗಳನ್ನು ತಪ್ಪಾಗಿ ಸಲ್ಲಿಸಿದ್ದು, ಸರಿಪಡಿಸಿಕೊಳ್ಳುವಂತೆ ಬ್ಯಾಂಕಿಗೆ ಪತ್ರ ವ್ಯವಹಾರ ಅಥವಾ ಇ-ಮೇಲ್ ಮೂಲಕ ಕಳುಹಿಸುವ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

(xii) ಈ ನೇಮಕಾತಿ ಸಂಬಂಧ ಅಭ್ಯರ್ಥಿಗಳು ಬ್ಯಾಂಕ್‌ನೊಂದಿಗೆ ಯಾವುದೇ ಪತ್ರ ವ್ಯವಹಾರ ನಡೆಸತಕ್ಕದ್ದಲ್ಲ.

(xiii) ಲಿಖಿತ ಪರೀಕ್ಷೆಯ ಪ್ರವೇಶಪತ್ರವನ್ನು ಅಧಿಕೃತ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಅರ್ಹ ಅಭ್ಯರ್ಥಿ ಲಿಖಿತ ಪರೀಕ್ಷೆಯಲ್ಲಿ ಹಾಜರುಪಡಿಸತಕ್ಕದ್ದು. ಪ್ರವೇಶ ಪತ್ರದ ಅನುಪಸ್ಥಿತಿಯಲ್ಲಿ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ ಹಾಗೂ ತಪ್ಪಿದ್ದಲ್ಲಿ ಬ್ಯಾಂಕ್ ಹೊಣೆಯಾಗಿರುವುದಿಲ್ಲ.

(xiv) ಆಯ್ಕೆಯಾದ ಅಭ್ಯರ್ಥಿಗಳು ಬ್ಯಾಂಕ್ ಸೂಚಿಸಲ್ಪಟ್ಟ ಭದ್ರತೆಯೊಂದಿಗೆ ಬ್ಯಾಂಕಿನ ಆಡಳಿತ ಕಛೇರಿ ಮತ್ತು ಯಾವುದೇ ಶಾಖೆಯಲ್ಲಿ ಕೆಲಸ ಮಾಡಲು ಸಿದ್ಧರಾಗಿರಬೇಕು ಹಾಗೂ ಅಭ್ಯರ್ಥಿಯ ಸೇವೆ ಪರಿಕ್ಷಾರ್ಥ ಸೇವೆಯ ಅವಧಿಯಲ್ಲಿ ತೃಪ್ತಿಕರವಾಗಿದ್ದಲ್ಲಿ ಮಾತ್ರ ಅಂತಹವರ ಸೇವೆಯನ್ನು ಖಾಯಂಗೊಳಿಸಲಾಗುವುದು.

(xv) ಆಯ್ಕೆಯಾದ ಅಭ್ಯರ್ಥಿಗಳು ಬ್ಯಾಂಕಿನ ನಿಯಮಗಳು, ಸಹಕಾರ ಸಂಘಗಳ ನಿಯಮಗಳು ಮತ್ತು ರಿಸರ್ವ್ ಬ್ಯಾಂಕ್ ನಿಯಮಾವಳಿಗಳಿಗೆ ಒಳಪಟ್ಟು ಕಾರ್ಯ ನಿರ್ವಹಿಸಲು ಬದ್ಧರಾಗಿರಬೇಕು.

(xvi) ಈ ಕೆಳಕಂಡ ಕಾರಣಗಳಿಗೆ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

- ➢ ಸಹಿ ಇಲ್ಲದ ಅರ್ಜಿಗಳು
- ➢ ಸರಿಯಾದ ಪ್ರಮಾಣ ಪತ್ರ ಸಲ್ಲಿಸದಿದ್ದಲ್ಲಿ ಮತ್ತು ಅಸ್ಪಷ್ಟ ಪ್ರಮಾಣ ಪತ್ರ ಸಲ್ಲಿಸಿದಲ್ಲಿ
- ➢ ಭಾವಚಿತ್ರ upload ಮಾಡದಿದ್ದಲ್ಲಿ
- ➢ ಶುಲ್ಕ ಪಾವತಿಸದಿದ್ದಲ್ಲಿ
- ➢ ನಿಗಧಿತ ಶುಲ್ಕಕ್ಕಿಂತ ಕಡಿಮೆ ಶುಲ್ಕ ಪಾವತಿಸಿದಲ್ಲಿ
- ➢ ವಯೋಮಿತಿ ಮೀರಿದ ಅರ್ಜಿಗಳು
- ➢ ಇನ್ನಿತರೆ ನೇಮಕಾತಿ ನಿಯಮಕ್ಕೆ ಅರ್ಹರಾಗದಿದ್ದಲ್ಲಿ

(xvii) ಇನ್ನಿತರೆ ಅಗತ್ಯ ನಿಬಂಧನೆಗಳನ್ನು ನೇಮಕಾತಿ ಆದೇಶದಲ್ಲಿ ತಿಳಿಸಲಾಗುವುದು.

ಸಹಿ/-
ಸದಸ್ಯ ಕಾರ್ಯದರ್ಶಿ ಸಿಬ್ಬಂದಿ ನೇಮಕಾತಿ ಸಮಿತಿ ಹಾಗೂ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ವೀರಶೈವ ಸಹಕಾರಿ ಬ್ಯಾಂಕ್ ಲಿ., ಬೆಂಗಳೂರು

ವೀರಶೈವ ಸಹಕಾರಿ ಬ್ಯಾಂಕ್ ಲಿ. ಆಡಳಿತ ಕಛೇರಿ ... ಬೆಂಗಳೂರು-40